**National**
**Kannada**
**11.01.2026 1.10 pm**

ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು

ಮುಖ್ಯಾಂಶಗಳು

೧. ಗುಜರಾತ್‌ನ 'ಸೋಮನಾಥ ಸ್ವಾಭಿಮಾನ್ ಪರ್ವ; 'ಶೌರ್ಯ ಯಾತ್ರೆ'ಯಲ್ಲಿ ಪಾಲ್ಗೊಂಡ ಪ್ರಧಾನಿ ನರೇಂದ್ರ ಮೋದಿ; ಇದೊಂದು ಐತಿಹಾಸಿಕ ಕ್ಷಣವೆಂದು ಬಣ್ಣನೆ

೨. ಇಂದು ಭಾರತ ರತ್ನ, ಸ್ವತಂತ್ರ ಭಾರತದ ಎರಡನೇ ಪ್ರಧಾನಮಂತ್ರಿ, ಲಾಲ್ ಬಹಾದ್ದೂರ್ ಶಾಸ್ತ್ರಿ ಅವರ ಪುಣ್ಯ ತಿಥಿ; ಗಣ್ಯರಿಂದ ಗೌರವನಮನ

೩. ಎರಡು ದಿನಗಳ ಭೇಟಿಗಾಗಿ ಜರ್ಮನಿಯ ಫೆಡರಲ್ ಚಾನ್ಸಲರ್ ಫ್ರೆಡ್ರಿಕ್ ಮೆರ್ಜ್ ನಾಳೆ ಭಾರತಕ್ಕೆ ಆಗಮನ

೪. ಮೂರು ಪಂದ್ಯಗಳ ಏಕದಿನ ಅಂತಾರಾಷ್ಟ್ರೀಯ ಕ್ರಿಕೆಟ್ ಸರಣಿ; ಇಂದು ಭಾರತ-ನ್ಯೂಜಿಲೆಂಡ್ ನಡುವಿನ ಮೊದಲ ಪಂದ್ಯ

೫. ಡಬ್ಲ್ಯೂ ಪಿಎಲ್ ಟಿ-೨೦ ಕ್ರಿಕೆಟ್; ೪ನೇ ಪಂದ್ಯದಲ್ಲಿ ಇಂದು ಗುಜರಾತ್ ಜೈಂಟ್ಸ್ ಹಾಗೂ ಡೆಲ್ಲಿ ಕ್ಯಾಪಿಟಲ್ಸ್ ಹಣಾಹಣಿ

**<>><><*><><<>**

ಗುಜರಾತ್ ಭೇಟಿಯ ಎರಡನೇ ದಿನವಾದ ಇಂದು ಪ್ರಧಾನಿ ನರೇಂದ್ರ ಮೋದಿ ಅವರು ಐತಿಹಾಸಿಕ 'ಸೋಮನಾಥ ಸ್ವಾಭಿಮಾನ್ ಪರ್ವ್‌ನ' ಭಾಗವಾಗಿ ಪ್ರಭಾಸ್ ಪಠಾಣ್‌ನಲ್ಲಿ ಆಯೋಜಿಸಲಾದ ಭವ್ಯವಾದ 'ಶೌರ್ಯ ಯಾತ್ರೆ'ಗೆ ನೇತೃತ್ವ ವಹಿಸಿದ್ದರು. ಶತಮಾನಗಳಿಂದ ಸೋಮನಾಥ ದೇವಾಲಯವನ್ನು ರಕ್ಷಿಸಿದ ಅಸಂಖ್ಯಾತ ಯೋಧರನ್ನು ಗೌರವಿಸಲು ಈ ಯಾತ್ರೆ ಆಯೋಜಿಸಲಾಗಿತ್ತು.

ಗುಜರಾತ್ ಮುಖ್ಯಮಂತ್ರಿ ಭೂಪೇಂದ್ರ ಪಟೇಲ್, ಉಪಮುಖ್ಯಮಂತ್ರಿ ಹರ್ಷ ಸಾಂಘವಿ ಯಾತ್ರೆಯಲ್ಲಿ ಭಾಗಿಯಾಗಿದ್ದರು. ದೇಶಾದ್ಯಂತದಿಂದ ಆಗಮಿಸಿದ್ದ ಸಾವಿರಾರು ಭಕ್ತರು ಮೆರವಣಿಗೆಯಲ್ಲಿ ಭಾಗವಹಿಸಿದ್ದರು. ಸೋಮನಾಥ ದೇವಾಲಯವನ್ನು ರಕ್ಷಿಸಲು ಪ್ರಾಣ ತ್ಯಾಗ ಮಾಡಿದ ಅಸಂಖ್ಯಾತ ಯೋಧರಿಗೆ ಪ್ರಧಾನಿ ಗೌರವನಮನ ಸಲ್ಲಿಸಿದರು. ನಂತರ ಪ್ರಧಾನಿ ಸೋಮನಾಥ ಮಹಾದೇವನಿಗೆ ಪೂಜೆ ಮತ್ತು ಪ್ರಾರ್ಥನೆ ಸಲ್ಲಿಸಿದರು.

ಈ ಶೌರ್ಯ ಪ್ರದರ್ಶನ 'ಏಕ್ ಭಾರತ್, ಶ್ರೇಷ್ಠ ಭಾರತ್' ನ ಸಂಕೇತವಾಗಿದೆ. ಈ ಯಾತ್ರೆಯಲ್ಲಿ ವಿವಿಧ ರಾಜ್ಯಗಳ ಕಲಾವಿದರು ಭಾರತೀಯ ಸಂಸ್ಕೃತಿಯ ಶ್ರೀಮಂತ ಪರಂಪರೆಯನ್ನು ಪ್ರತಿಬಿಂಬಿಸುವ ವಿವಿಧ ಸಾಂಸ್ಕೃತಿಕ ಪ್ರದರ್ಶನಗಳನ್ನು ನೀಡಿದರು. ಪವಿತ್ರ ಶಿವಲಿಂಗವನ್ನು

ರಕ್ಷಿಸಲು ಜಾಫರ್ ಖಾನ್ ಅವರ ಸೈನ್ಯದ ವಿರುದ್ಧ ಹೋರಾಡಿ, ತಮ್ಮ ಪ್ರಾಣವನ್ನೇ ತ್ಯಾಗ ಮಾಡಿದ ಲಾತಿಯ ಧೈರ್ಯಶಾಲಿ ರಾಜಕುಮಾರ ವೀರ್ ಹಮೀರ್ಜಿ ಗೋಹಿಲ್ ಅವರ ಪ್ರತಿಮೆಗೆ ಪ್ರಧಾನಿ ಗೌರವನಮನ ಸಲ್ಲಿಸಿದರು. ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತನಾಡಿದ ಪ್ರಧಾನಿ ನರೇಂದ್ರ ಮೋದಿ ಅವರು,

ಇಂದು ದೇಶದ ನಾನಾ ಮೂಲೆಗಳಿಂದ ಆಗಮಸಿರುವ ಲಕ್ಷಾಂತರ ಜನರು ನಮ್ಮೊಂದಿಗೆ ಕೈಜೋಡಿಸಿದ್ದಾರೆ. ಇದು ರಾಷ್ಟ್ರೀಯ ಗೌರವದ ಶಕ್ತಿಶಾಲಿ ಪ್ರತೀಕವಾಗಿದೆ. ಈ ಅನುಭವದ ಸಂಭ್ರಮವು ವರ್ಣನಾತೀತ ಐತಿಹಾಸಿಕ ಕ್ಷಣವಾಗಿದೆ. ಈ ಪರ್ವವು ಅನುಭವ, ಆನಂದ, ಆತ್ಮೀಯತೆಯ ಅದ್ಭುತ ಪ್ರತೀಕವಾಗಿದೆ ಎಂದು ಬಣ್ಣಿಸಿದ್ದಾರೆ.

ಸ್ವಾತಂತ್ರ್ಯದ ನಂತರ ಮೇ ೧೧, ೧೯೫೧ ರಂದು ಪ್ರಸ್ತುತ ಸೋಮನಾಥ ದೇವಾಲಯವನ್ನು ಭಕ್ತರಿಗೆ ಮತ್ತೆ ತೆರೆಯುವ ಮೂಲಕ ೨೦೨೬ ಎಪ್ಪತ್ತೈದು ವರ್ಷಗಳನ್ನು ಪೂರೈಸುತ್ತದೆ ಎಂದು ಹೇಳಿದರು.

ಈ ಮೈಲಿಗಲ್ಲುಗಳು ಒಟ್ಟಾಗಿ ಸೋಮನಾಥ ಸ್ವಾಭಿಮಾನ ಪರ್ವದ ಆಧಾರವನ್ನು ರೂಪಿಸುತ್ತವೆ. ಈ ಆಚರಣೆಯನ್ನು ವಿನಾಶದ ಸ್ಮರಣೆಯಾಗಿ ಅಲ್ಲ, ಬದಲಾಗಿ ಸಾವಿರ ವರ್ಷಗಳ ಸ್ಥಿತಿಸ್ಥಾಪಕತ್ವ, ನಂಬಿಕೆ ಮತ್ತು ನಾಗರಿಕತೆಯ ಸ್ವಾಭಿಮಾನದ ಪ್ರಯಾಣಕ್ಕೆ ಗೌರವವಾಗಿ ಆಚರಿಸಲಾಗುತ್ತಿದೆ ಎಂದು ತಿಳಿಸಿದರು.

<>><><*><><<>

ಭಾರತ ರತ್ನ, ಸ್ವತಂತ್ರ ಭಾರತದ ಎರಡನೇ ಪ್ರಧಾನಮಂತ್ರಿ, ಲಾಲ್ ಬಹಾದ್ದೂರ್ ಶಾಸ್ತ್ರಿ ಅವರ ಪುಣ್ಯ ತಿಥಿ ಇಂದು.

’ಜೈ ಜವಾನ್, ಜೈ ಕಿಸಾನ್’ ಘೋ?ಣೆ ಮೂಲಕ, ಜನಪ್ರಿಯ ಮುತ್ಸದ್ದಿಯಾದ ಶಾಸ್ತ್ರೀಜಿ, ಸ್ವಾತಂತ್ರ್ಯ ಸೇನಾನಿಯಾಗಿದ್ದರು. ಜನವರಿ ೧೧, ೧೯೬೬ ರಲ್ಲಿ, ತಾಷ್ಕೆಂಟ್‌ನಲ್ಲಿ ನಿಧನರಾದ ಶಾಸ್ತ್ರೀಜಿ, ಜಾಗತಿಕವಾಗಿ ’ಶಾಂತಿ ದೂತ’ ಎಂದೇ ಗುರುತಿಸಲ್ಪಟ್ಟವರು. ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಉಪರಾಷ್ಟ್ರಪತಿಗಳ ಭವನದಲ್ಲಿ ಮಾಜಿ ಪ್ರಧಾನಿ ಲಾಲ್ ಬಹದ್ದೂರ್ ಶಾಸ್ತ್ರಿ ಅವರ ಪುಣ್ಯತಿಥಿಯಂದು ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು. ಈ ಕುರಿತು ಸಾಮಾಜಿಕ ಮಾಧ್ಯಮ ಪೋಸ್ಟ್ ಮಾಡಿರುವ, ಉಪರಾಷ್ಟ್ರಪತಿಗಳು, ಮಾಜಿ ಪ್ರಧಾನಿ ಒಬ್ಬ ದಾರ್ಶನಿಕ ನಾಯಕರಾಗಿದ್ದರು, ಅವರ ಜೀವನವು ಸರಳತೆ, ಸಮಗ್ರತೆ ಮತ್ತು ರಾಷ್ಟ್ರಕ್ಕೆ ಅಚಲ ಸಮರ್ಪಣೆಯನ್ನು ತೋರಿಸುತ್ತದೆ ಎಂದು ಹೇಳಿದ್ದಾರೆ.

ಅವರ ಜೈ ಜವಾನ್, ಜೈ ಕಿಸಾನ್ ಘೋಷಣೆ ಪೀಳಿಗೆಗೆ ಸ್ಫೂರ್ತಿ ನೀಡುತ್ತಲೇ ಇದೆ. ಇದು ದೇಶದ ಸೈನಿಕರು ಮತ್ತು ರೈತರ ಬಗ್ಗೆ ಅವರ ಆಳವಾದ ಗೌರವವನ್ನು ಪ್ರತಿಬಿಂಬಿಸುತ್ತದೆ. ಅವರ ನಿಸ್ವಾರ್ಥ

ಸೇವೆ, ನಮ್ರತೆ ಮತ್ತು ರಾಷ್ಟ್ರೀಯ ಏಕತೆಯ ಆದರ್ಶಗಳು ದೇಶಕ್ಕೆ ಮಾರ್ಗದರ್ಶಕ ಬೆಳಕಾಗಿ ಉಳಿದಿವೆ ಎಂದು ಎಂದು ತಿಳಿಸಿದ್ದಾರೆ.

<>><><*><><<>

ಜರ್ಮನಿಯ ಫೆಡರಲ್ ಚಾನ್ಸಲರ್ ಫೆಡ್ರಿಕ್ ಮೆರ್ಜ್ ಎರಡು ದಿನಗಳ ಭಾರತ ಭೇಟಿಗಾಗಿ ನಾಳೆ ಆಗಮಿಸಲಿದ್ದಾರೆ.

ಅವರು ಮೊದಲ ಹಂತದಲ್ಲಿ ಗುಜರಾತ್‌ನ ಸಬರಮತಿ ಆಶ್ರಮಕ್ಕೆ ಭೇಟಿ ನೀಡಿ, ಗೌರವ ಸಮರ್ಪಣೆ ಮಾಡಲಿದ್ದಾರೆ.

ನಂತರ ಉಭಯ ದೇಶಗಳ ಸಾಂಸ್ಕೃತಿಕ ಸಂಬಂಧಗಳನ್ನು ಪ್ರತಿಬಿಂಬಿಸುವ ಅಂತಾರಾಷ್ಟ್ರೀಯ ಗಾಳಿಪಟ ಉತ್ಸವದಲ್ಲಿ ಪಾಲ್ಗೊಳ್ಳುವರು. ಬಳಿಕ ಫೆಡ್ರಿಕ್ ಮೆರ್ಜ್ ಮಹಾತ್ಮ ಮಂದಿರಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ ನಿಯೋಗಮಟ್ಟದ ಮಾತುಕತೆ ನಡೆಸಲಿದ್ದಾರೆ. ಭಾರತ ಸ್ವಾತಂತ್ರ ಚಳವಳಿ ಹಾಗೂ ಮಹಾತ್ಮಾಗಾಂಧೀಜಿಯವರ ಜೀವನ-ಸಾಧನೆ ಸಾದರಪಡಿಸುವ ದಾಂಡಿ ಕುಟೀರಕ್ಕೂ ಪ್ರಧಾನಿ ಭೇಟಿ ನೀಡಲಿದ್ದಾರೆ. ಎರಡನೇ ದಿನದಂದು ಚಾನ್ಸಲರ್ ಫೆಡ್ರಿಕ್ ಮೆರ್ಜ್, ಬೆಂಗಳೂರಿನ ಆಡುಗೋಡಿಯಲ್ಲಿರುವ ಭಾರತ-ಜರ್ಮನಿ ಸಹಯೋಗದ ಬಾಷ್ ಆವಿಷ್ಕಾರ ಮತ್ತು ತಯಾರಿಕಾ ಘಟಕಕ್ಕೆ ಭೇಟಿ ನೀಡಲಿದ್ದಾರೆ ಎಂದು ವಿದೇಶಾಂಗ ಸಚಿವಾಲಯ ತಿಳಿಸಿದೆ. ಜರ್ಮನಿಯ ಫೆಡರಲ್ ಚಾನ್ಸಲರ್ ಅವರ ಭೇಟಿಯಿಂದಾಗಿ ಉಭಯ ದೇಶಗಳ ಆರ್ಥಿಕ, ತಾಂತ್ರಿಕ ಮತ್ತು ಕಾರ್ಯತಂತ್ರ ಸಹಭಾಗಿತ್ವ ಬಲಗೊಳ್ಳುವುದೆಂದು ನಿರೀಕ್ಷಿಸಲಾಗಿದೆ.

<>><><*><><<>

ವಿದೇಶಾಂಗ ಸಚಿವ ಡಾ.ಎಸ್.ಜೈಶಂಕರ್ ಕೈಗೊಂಡಿದ್ದ ಫ್ರಾನ್ಸ್ ಮತ್ತು ಲಕ್ಸೆಂಬರ್ಗ್‌ಗೆ ಭೇಟಿ ಮುಕ್ತಾಯಗೊಂಡಿದೆ. ಈ ಭೇಟಿಯು ಯುರೋಪ್‌ನೊಂದಿಗಿನ ಭಾರತದ ಸಂಬಂಧ ಪ್ರತಿಬಿಂಬಿಸುತ್ತದೆ. ಡಾ.ಎಸ್.ಜೈಶಂಕರ್ ತಮ್ಮ ಭೇಟಿಯ ಸಮಯದಲ್ಲಿ ಫ್ರೆಂಚ್ ಅಧ್ಯಕ್ಷ ಎಮ್ಯಾನುಯೆಲ್ ಮ್ಯಾಕ್ರನ್ ಮತ್ತು ಫ್ರೆಂಚ್ ವಿದೇಶಾಂಗ ಸಚಿವ ಜೀನ್ ನೋಯೆಲ್ ಬ್ಯಾರಟ್ ಅವರೊಂದಿಗೆ ದ್ವಿಪಕ್ಷೀಯ ಮಾತುಕತೆ ನಡೆಸಿದರು ಎಂದು ವಿದೇಶಾಂಗ ಸಚಿವಾಲಯ ತಿಳಿಸಿದೆ. ಈ ಮಾತುಕತೆಯಲ್ಲಿ ಭಾರತ-ಫ್ರಾನ್ಸ್ ನಾವೀನ್ಯತೆ ವರ್ಷವನ್ನು ಗಮನದಲ್ಲಿಟ್ಟುಕೊಂಡು, ನಾವೀನ್ಯತೆ ಮತ್ತು ತಂತ್ರಜ್ಞಾನ, ಸ್ಟಾರ್ಟ್‌ಅಪ್‌ಗಳು, ಆರೋಗ್ಯ, ಶಿಕ್ಷಣ ಮತ್ತು ಚಲನಶೀಲತೆಯ ಕ್ಷೇತ್ರಗಳ ಕುರಿತು ಎರಡೂ ಕಡೆಯವರು ಚರ್ಚಿಸಿದರು.

<>><><*><><<>

ನವದೆಹಲಿಯಲ್ಲಿಂದು  ೫೬ನೇ ಫಿಟ್ ಇಂಡಿಯಾ ಸಂಡೇಸ್ ಆನ್ ಸೈಕಲ್ ಜಾಥಾ ಆವೃತ್ತಿಯಲ್ಲಿ ಕೇಂದ್ರ ಯುವಜನ ವ್ಯವಹಾರ ಹಾಗೂ ಕ್ರೀಡಾ ಸಚಿವರಾದ  ಡಾ. ಮನ್ಸುಖ್ ಮಾಂಡವೀಯ ಭಾಗವಹಿಸಿದ್ದರು. ಈ ಆವೃತ್ತಿಯಲ್ಲಿ ದೇಶಾದ್ಯಂತದ ವಿಕಸಿತ್ ಭಾರತ್ ಯುವ ನಾಯಕರು ಕೂಡ ಪಾಲ್ಗೊಂಡಿದ್ದರು. ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದ ಡಾ. ಮಾಂಡವೀಯ ನಾಯಕತ್ವದಲ್ಲಿ ಸಮತೋಲನೆ ಮತ್ತು ಸಮತೋಲಿಸುವುದು ಅತ್ಯವಶ್ಯಕ ಎಂಬುದನ್ನು ಸೈಕ್ಲಿಂಗ್ ಕಲಿಸುತ್ತದೆ, ಹಾಗೆಯೇ ಈ ಸೈಕ್ಲಿಂಗ್‌ನಿಂದ  ದೇಶದ ಯುವಜನತೆ  ಯಾವಾಗ ತಾಳ್ಮೆಯಿಂದಿರಬೇಕು, ಯಾವಾಗ ಸಾವಧಾನದಿಂದಿರಬೇಕು ಮತ್ತು ಯಾವಾಗ ವೇಗವರ್ಧಿಸಿಕೊಳ್ಳಬೇಕು ಎಂಬುದನ್ನು ಕಲಿಯಬಹುದು ಎಂದರು. ಸದೃಢತೆ ಮತ್ತು ಆರೋಗ್ಯಕರ ಯುವಜನತೆಯು  ರಾಷ್ಟ್ರದ ಅಭಿವೃದ್ಧಿಯನ್ನು  ಮುನ್ನಡೆಸಲು ಸಹಾಯ ಮಾಡಬಹುದು ಮತ್ತು ಸೈಕ್ಲಿಂಗ್  ಅದರ  ಒಂದು ಭಾಗವಾಗಿದೆ ಎಂದರು. ದೇಶಾದ್ಯಂತ ಸುಮಾರು ೧೫ ಸಾವಿರ ಸ್ಥಳಗಳಲ್ಲಿ ಇಂದು ಆಯೋಜನೆಗೊಂಡಿರುವ ಸಂಡೇಸ್ ಆನ್ ಸೈಕಲ್ ರ‍್ಯಾಲಿ ಮೂಲಕ ಯುವಜನತೆಯು ಸಧೃಡತೆಯ ಸಂದೇಶವನ್ನು ಸಾರುತ್ತಿದ್ದಾರೆ ಎಂದ ಅವರು ಕಳೆದ  ಸಾಲಿನ  ಸಂಡೇ  ಆನ್ ಸೈಕ್ಲಿಂಗ್ ರ‍್ಯಾಲಿಯು ದೇಶದ ೨೪೦ ಸ್ಥಳಗಳಲ್ಲಿ ಆಯೋಜನೆಗೊಂಡಿತ್ತು ಎಂದು ಡಾ. ಮಾಂಡವೀಯ ತಿಳಿಸಿದರು.

<>><><*><><<>

ನವದೆಹಲಿಯ ಭಾರತ್ ಮಂಟಪದಲ್ಲಿ ವಿಶ್ವ ಪುಸ್ತಕ ಮೇಳ-೨೦೨೬ ರ ೫೩ನೇ ಆವೃತ್ತಿ ಆರಂಭವಾಗಿದೆ. ಈ ಮೇಳವು ಭಾರತ ಮತ್ತು ಪ್ರಪಂಚದಾದ್ಯಂತದ ಪ್ರಕಾಶಕರು, ಲೇಖಕರು, ಓದುಗರು ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಒಟ್ಟುಗೂಡಿಸುತ್ತದೆ. ನಿನ್ನೆಯಿಂದ ಆರಂಭವಾಗಿರುವ ಈ ಪುಸ್ತಕ ಮೇಳದಲ್ಲಿ ೩೫ ಕ್ಕೂ ಹೆಚ್ಚು ದೇಶಗಳನ್ನು ಪ್ರತಿನಿಧಿಸುವ ಸಾವಿರಕ್ಕೂ ಹೆಚ್ಚು ಪ್ರಕಾಶಕರ ಭಾಗಿಯಾಗಿದ್ದಾರೆ. ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು ಈ ಮೇಳವನ್ನು ಉದ್ಘಾಟಿಸಿದ್ದಾರೆ. ಮೇಳದ ವಿಷಯ ಭಾರತೀಯ ಮಿಲಿಟರಿ ಇತಿಹಾಸ: ಶೌರ್ಯ ಮತ್ತು ಬುದ್ಧಿವಂತಿಕೆ @ ೭೫ ಆಗಿದೆ. ಇಂಗ್ಲಿಷ್, ಹಿಂದಿ ಮತ್ತು ಇತರ

<>><><*><><<>

ಭಾರತ-ನ್ಯೂಜಿಲೆಂಡ್ ತಂಡಗಳ ನಡುವಿನ ಮೂರು ಪಂದ್ಯಗಳ ಏಕದಿನ ಕ್ರಿಕೆಟ್ ಸರಣಿ ಇಂದಿನಿಂದ ಆರಂಭವಾಗಲಿದ್ದು, ಗುಜರಾತ್‌ನ ವಡೋದರದಲ್ಲಿ ಇಂದು ಮಧ್ಯಾಹ್ನ ೧.೩೦ ಕ್ಕೆ ಮೊದಲ ಪಂದ್ಯ ಆರಂಭವಾಗಲಿದೆ.

<>><><*><><<>